## <u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.</u>

**ಸಿ.ಸಿ.ನಂ. 4417/2023**

PW -02
CW-02

ಸಾಕ್ಷಿದಾರನ ಹೆಸರುಃ- ಯಮನೂರು
ತಂದೆಯ ಹೆಸರು ನಾಗಪ್ಪ
ವಯಸ್ಸು 30 ವರ್ಷ
ಉದ್ಯೋಗ ಗ್ರಾಮ ಆಡಳಿತಾಧಿಕಾರಿ
ವಾಸ ತಾವರೆಕೆರೆ ಗ್ರಾಮ

**<u>ಸಾಕ್ಷಿಗೆ ದಿಃ 09.12.2025 ರಂದು ಪ್ರಮಾಣ ವಚನ ಬೋದಿಸಲಾಯಿತು.</u>**
**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಸಾಕ್ಷಿಯು ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ನಿ.ಪಿ.1(ಎ) ಎಂದು ಗುರುತಿಸಲಾಯಿತು. ದಿಃ 27.10.2020 ರಂದು ಸಂಜೆ 7.30ರ ಸಮಯದಲ್ಲಿ ಬಿಳಿ ದೇವಾಲಯದ ಬಳಿ ನನ್ನ ಸಹಿ ಪಡೆದಿರುತ್ತಾರೆ.ಒಣ ಗಾಂಜಾವನ್ನು ಜಪ್ತು ಮಾಡಿರುವ ಕುರಿತು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ದಿಃ 27.10.2020 ರಂದು ನಾನು ಕರ್ತವ್ಯದ ಮೇಲೆ ಇದ್ದು ನನ್ನ ಮೇಲಾಧಿಕಾರಿ ನನಗೆ ಕರೆ ಮಾಡಿ ಅಭಕಾರಿ ಪೋಲಿಸರ ಜೊತೆ ಪಂಚರಾಗಿ ಸಹಕರಿಸುವಂತೆ ಹೇಳಿ ಪತ್ರವನ್ನು ನೀಡಿದ್ದು ನಾನು ಅದರಂತೆ ಬಿಳಿ ದೇವಾಲಯಕ್ಕೆ ಹೋಗಿದ್ದು ಎಡಿಯೂರು ಕಡೆಯಿಂದ ಕುಣಿಗಲ್ ಕಡೆಗೆ ವಾಹನದಲ್ಲಿ ಗಾಂಜಾವನ್ನು ಸಾಗಾಟ ಮಾಡುತ್ತಿರುವ ಬಗ್ಗೆ ಮಾಹಿತಿ ತಿಳಿಸಿದ್ದು ನಂತರ ನಾವು ತೋಟಗಾರಿಕೆ ನಿರ್ದೇಶಕರ ಕಚೇರಿಯ ಗೇಟ್ ಬಳಿ ವಾಹನಗಳನ್ನು ತಪಾಸಣೆ ಮಾಡುತ್ತಿದ್ದು ಆ ಸಮಯದಲ್ಲಿ ಒಂದು ಸ್ಕೋಟ್ 125 ಎಕ್ಸಸ್ಸ ಬಂದಿದ್ದು ಅದನ್ನು ಪರಿಶೀಲನೆ ಮಾಡಿದಾಗ ಸೀಟ್ ಕವರ್ ಕೆಳಗೆ ಇರುವ ಡಿಕ್ಕಿಯನ್ನು ತೆಗೆದು ನೋಡಲಾಗಿ ಅದರಲ್ಲಿ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ ಇದ್ದು ಅದನ್ನು ತೆರೆದು ನೋಡಲಾಗಿ ಪಾರದರ್ಶಕ ಇದ್ದು ಅದರಲ್ಲಿ ಸೊಪ್ಪು ಹೂ, ಮತ್ತು ಬೀಜ ಇದ್ದು ಅದನ್ನು ಚಾಸಾ 7 ಅವರು ತಿಕ್ಕಿ ನೋಡಲಾಗಿ ಗಾಂಜಾದ ಗಾಟು ವಾಸದೇ ಬಂದಿದ್ದು ಅದು ಗಾಂಜಾ ವೆಂದು ನಮಗೆ ತಿಳಿಸಿರುತ್ತಾರೆ.

ನಂತರ ಅದನ್ನು ತೂಕ ಮಾಡಿ ನೋಡಲಾಗಿ ಅದನ್ನು 500 ಗ್ರಾಂ ಇರುತ್ತದೆ. ಅದರಲ್ಲಿ ತಲಾ 30 ರಂತೆ ಎರಡು ಪ್ಯಾಕೇಟಗಳನ್ನು ಮಾದರಿಯನ್ನು ತಗೆದು ಲಕೋಟೆಗೆ ಹಾಕಿ ಸೀಲ್ ಮಾಡಿರುತ್ತಾರೆ.

ಸದರಿ ದ್ವಿ ಚಕ್ರ ವಾಹನ ಸವಾರನನ್ನು ಎಲ್ಲಿಗೆ ತಗೆದುಕೊಂಡು ಹೋಗಿರುತ್ತೀರಾ ಎಂದು ಹೇಳಿರುತ್ತಾರೆ ಸದರಿ ವ್ಯಕ್ತಿ ಅದನ್ನು ಮಾರಾಟ ಮಾಡುವ ಉದ್ದೇಶದಿಂದ ತಗೆದುಕೊಂಡು ಹೋಗುತ್ತಿರುವುದಾಗಿ ಹೇಳುತ್ತಾರೆ. ಅವುಗಳನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಳ್ಳಬೇಕು ಯಾರು ಸಹಕರಿಸುತ್ತಿಲ್ಲ ನಿವೇ ಮತ್ತೊಮ್ಮೆ ಪಂಚರಾಗಿ ಸಹಕರಿಸಿ ಎಂದು ಕೋರಿದ್ದು ಅದಕ್ಕೆ  ನಾವು ಒಪ್ಪಿ ಮಹಜರಗೆ ಸಹಿ ಮಾಡಿರುತ್ತೇನೆ.

**ಈ ಹಂತದಲ್ಲಿ ಸ. ಸ. ಅ. ಅವರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**